ಅ) ಗಿಡಗಳನ್ನು ನೆಡಲು ರೂ. 22,068.55 ಲಕ್ಷ ಮತ್ತು ಇತರ ಕೆಲಸಗಳಿಗೆ

ಆ) ನೌಕರ ವರ್ಗದವರಿಗೆ ರೂ. 7,897.19 ಲಕ್ಷ.

3. ಅರಣ್ಯ ಇಲಾಖೆಯ ಕಳೆದ ಮೂರು ವರ್ಷಗಳ ಆದಾಯದ ವಿವರಗಳು ಕೆಳಗಿನಂತಿದೆ.

ವರ್ಷ	ಆದಾಯ (ಲಕ್ಷ ರೂ.ಗಳಲ್ಲಿ)
1997-98	11,334.55
1998-99	10,685.96
1999-2000	9,391.22

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ರಜಾ ಸೌಲಭ್ಯ

4986 - ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಾಕೊಂಡ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ರಜಾ ಸೌಲಭ್ಯ ಕೊಡುವಲ್ಲಿ ತಾರತಮ್ಯವನ್ನು ಆಡಳಿತ ವರ್ಗದವರು ಮಾಡುತ್ತಿರುವ ಬಗ್ಗೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಮಜ್ದೂರ್ ಸಂಘ ದಾವಣಗೆರೆ ಇವರು ಸಹಾಯಕ ಕಾರ್ಮಿಕ ಆಯುಕ್ತರು ದಾವಣಗೆರೆ ಇವರ ಗಮನ ಸೆಳೆದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸದರಿ ಅಧಿಕಾರಿಯವರು ತೆಗೆದುಕೊಂಡಿರುವ ಕ್ರಮಗಳೇನು?

ಇ) ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ಕಾನೂನಿನ ಪ್ರಕಾರ ಸಿಗಬೇಕಾಗಿರುವ ಸೌಲಭ್ಯಗಳೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ನಿಜವಲ್ಲ.

ಆ) ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ಕೆಳಗೆ ನಮೂದಿಸಿದ ಆಯಾಯಾ ಕಾನೂನಿನಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳು ದೊರೆಯುತ್ತವೆ.

1. ಕಾರ್ಖಾನೆ ಕಾಯ್ದೆ 1948ರಡಿಯಲ್ಲಿ ರಜೆ, ಕ್ಯಾಂಟೀನ್, ವೈದ್ಯಕೀಯ ಇತ್ಯಾದಿ ಸೌಲಭ್ಯಗಳು.

2. ಬೋನಸ್ ಪಾವತಿ ಕಾಯ್ದೆ 1965ರಡಿ ವಾರ್ಷಿಕ ಬೋನಸ್

3. ರಾಷ್ಟ್ರೀಯ ಹಬ್ಬದ ರಜಾ ದಿನದ ಕಾಯ್ದೆ 1963ರ ಅಡಿ ವೇತನ ಸಮೇತ ರಾಷ್ಟ್ರೀಯ ಹಬ್ಬದ ರಜಾ ಸೌಲಭ್ಯ.
4. ಭವಿಷ್ಯ ನಿಧಿ ಕಾಯ್ದೆ 1952ರ ಅಡಿ ಭವಿಷ್ಯ ನಿಧಿ
5. ಉಪಧನ ಪಾವತಿ ಕಾಯ್ದೆ 1972ರ ಅಡಿ ನಿವೃತ್ತಿ ಹೊಂದಿದಾಗ ಅಥವಾ ಕೆಲಸ ಬಿಟ್ಟಾಗ ಉಪಧನ ಸೌಲಭ್ಯಗಳು.
6. ತ್ರಿಪಕ್ಷೀಯ ವೇತನ ಒಪ್ಪಂದದ ಅನುಗುಣವಾಗಿ ಹೊರಡಿಸಿದ ಸರ್ಕಾರಿ ಆದೇಶದ ಅಡಿಯಲ್ಲಿ ವೇತನ ಪರಿಷ್ಕರಣೆ ತುಟ್ಟಿಭತ್ಯೆ, ವೈದ್ಯಕೀಯ ಮತ್ತು (ರಿಟೇನಿಂಗ್) ಪ್ರತಿದಾರಣ ಭತ್ಯೆ ಸೌಲಭ್ಯ.

ಮಾಗಡಿ ತಾಲ್ಲೂಕಿನಲ್ಲಿರುವ ಜಾನುವಾರುಗಳು ಹಾಗೂ ಪಶುವೈದ್ಯ ಶಾಲೆಗಳು

4988 - ಶ್ರೀ ರೇವಣ್ಣ ಹೆಚ್.ಎಂ. (ಮಾಗಡಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿರುವ ಜಾನುವಾರು ಮತ್ತು ಕುಕ್ಕುಟಗಳ ಸಂಖ್ಯೆ ಎಷ್ಟು?

ಆ) ಅವುಗಳಿಗನುಗುಣವಾಗಿರುವ ಪಶುವೈದ್ಯ ಶಾಲೆಗಳು, ಹೊಸದಾಗಿ ಪಶುವೈದ್ಯ ಶಾಲೆಗಳನ್ನು ತೆರೆಯುವ ವಿಷಯದ ಬಗ್ಗೆ ಸರ್ಕಾರ ಯೋಚಿಸುತ್ತಿದೆಯೇ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು) :

ಅ)	ಜಾನುವಾರುಗಳು	1,98,114
	ಕುಕ್ಕುಟ	1,20,398
ಆ)	ಒಟ್ಟು ಪಶುವೈದ್ಯ ಸಂಸ್ಥೆಗಳು	22
	ಪಶು ಆಸ್ಪತ್ರೆ	1
	ಪಶು ಚಿಕಿತ್ಸಾಲಯ	6
	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	15
	ಇಲ್ಲ.	

ಹುಲಸೂರು ಮತಕ್ಷೇತ್ರದಲ್ಲಿ ಪ್ರವಾಸಿ ತಾಣಗಳನ್ನು ಗುರುತಿಸುವುದು

4990 - ಶ್ರೀ ರಾಜೇಂದ್ರ ವರ್ಮ (ಹುಲಸೂರು) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಲಸೂರು ಮತ ಕ್ಷೇತ್ರದಲ್ಲಿ ಯಾವ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಇಲಾಖೆಯು ಗುರುತಿಸಿದೆ?